ಸುಮಾರು ಒಂದು ಗಂಟೆಯ ಕಾಲ ಏರಿದ್ದೆವು. ಘರವಾಲ್ ಹಿಮಾಲಯ ಪರ್ವತಗಳ ಹಿಮಚ್ಛಾದಿತ ಗಿರಿಶಿಖರಗಳು ಮೆಲ್ಲಮೆಲ್ಲನೆ ಕಾಣತೊಡಗಿದವು. ಹಿಂದಿನ ದಿನ ಬರೀ ಕಾಡಿನಲ್ಲೇ ಏರುನಡಿಗೆಯಲ್ಲಿ ಬಂದಿದ್ದ ನಮಗೆ ಯಾವುದೇ ಹಿಮಶಿಖರಗಳು ಕಂಡಿರಲಿಲ್ಲ. ಆದರೆ ಈಗ 360 ಡಿಗ್ರಿಯಲ್ಲಿಯೂ ಶ್ವೇತಶಿಖರಗಳು. ಗೈಡ್, ತೋರುಬೆರಳು ಮಾಡಿ ಒಂದೊಂದು ಶಿಖರದ ಹೆಸರುಗಳನ್ನು ಹೇಳತೊಡಗಿದ – ರುದ್ರೈಗೈರಾ, ಗಂಗೋತ್ರಿ, ಜೋನಲಿ, ಬಂದರ್ ಪೂಂಛ್, ಭಾಗೀರಥೀ, ಕಾಳಾನಾಗ್...

ನಾವು ಅವನ ಮಾತಿಗೆ ಗಮನ ಕೊಡದೆ, ಚಿತ್ರಗಳನ್ನು ತೆಗೆಯುವಲ್ಲಿ ತಲ್ಲೀನರಾದೆವು. ಇಂದಿನ ಮಾರ್ಗದಲ್ಲಿ ಕಾಡು ಕಡಿಮೆಯಾಗಿ, ಕಣ್ಣು ಹಾಯಿಸಿದಷ್ಟೂ ಹಸುರು ಹುಲ್ಲಿನ ದಿಬ್ಬಗಳೇ ಕಂಡವು. ಅಲ್ಲಲ್ಲಿ ಕುರಿಗಳ ಹಿಂಡು, ಹಸುಗಳು ಮೇಯುತ್ತಿದ್ದವು. ಸಣ್ಣಸಣ್ಣ ಕಲ್ಲು ಗೋಡೆಗಳ ಗುಡಿಸಲುಗಳು ಕಂಡುಬಂದವು. ಬಾರಸು ಹಳ್ಳಿಯಿಂದ ಜನ ಹಸು, ಕುರಿ, ಮೇಕೆಗಳನ್ನು ಮೇಯಲು ಕರೆತಂದು, ರಾತ್ರಿ ಗುಡಿಸಲುಗಳಲ್ಲಿ ಇದ್ದು ಹೋಗುವ ಮಾಹಿತಿ ತಿಳಿಯಿತು.

ಇನ್ನೂ ಎರಡು ಗಂಟೆಗಳ ಕಾಲ ನಡೆದ ನಮಗೆ, ಹಿಂದಿನ ದಿನದಂತೆ ಬೇಗ ದಣಿವಾಗಲಿಲ್ಲ. ನಮ್ಮ ಶ್ವಾಸಕೋಶಗಳು ಸ್ವಲ್ಪಮಟ್ಟಿಗೆ ಆ ಎತ್ತರದ ಹವಾಮಾನಕ್ಕೆ ಹೊಂದಾಣಿಕೆ ಮಾಡಿಕೊಂಡಿದ್ದವು ಅನಿಸುತ್ತದೆ. ಏರು ನಡಿಗೆಯೂ ಕಡಿಮೆಯಾಗಿತ್ತು. ದೂರದಲ್ಲಿ ಮತ್ತೆ ಬಣ್ಣದ ಡೇರೆಗಳನ್ನು ನೋಡಿ ಸಂತಸವಾಯಿತು. ಅಂದರೆ ಈ ದಿನದ ಚಾರಣ ಮುಗಿಯಿತು ಎಂದರ್ಥ.

## ಚುರುಗುಟ್ಟುವ ಚಳಿಯಲ್ಲಿ...

ಚುರುಚುರು ಬಿಸಿಲಿನಲ್ಲಿ ಹಿಮಶಿಖರಗಳ ಸೌಂದರ್ಯ ಆಸ್ವಾದಿಸುತ್ತಿದ್ದ ನಮಗೆ ಸಣ್ಣ ಅದ್ಭುತ ಕಂಡಿತು. ಹತ್ತೇ ನಿಮಿಷದಲ್ಲಿ ಎಲ್ಲಿಯೋ ಇದ್ದ ಮೋಡಗಳು ದಟ್ಟನೆ ಕವಿದು ಜೋರಾದ ಮಳೆ ಶುರುವಾಯಿತು. ತೊಪ್ಪೆಯಾಗಿದ್ದ ಎಲ್ಲರೂ ಓಡಿ ಬೇಗ ಡೇರೆ ಸೇರಿದೆವು. ಕುದುರೆಗಳು ಮಳೆಯಲ್ಲಿಯೇ ಹುಲ್ಲು ಮೇಯುತ್ತಾ, ಅವುಗಳ ಕುತ್ತಿಗೆಗೆ ಕಟ್ಟಿದ್ದ ಗಂಟೆಗಳಿಂದ ಕಿಣಿಕಿಣಿ ನಾದ ಹೊರಡಿಸುತ್ತಾ ಡೇರೆಗಳ ಪಕ್ಕದಲ್ಲೇ ಓಡಾಡಿಕೊಂಡಿದ್ದವು.



ಬಾರಸು ಹಳ್ಳಿಯ ನೋಟ

ನಮ್ಮ ಡೇರೆಗಳಿದ್ದ ಜಾಗವೇ ದಯಾರ ಬುಗ್ಯಲ್! ನಿಜಕ್ಕೂ ಹಸುರು ತುಂಬಿದ್ದ ಆ ಜಾಗ ಸ್ವರ್ಗದಂತೆಯೇ ಕಂಡಿತ್ತು. ಮಳೆಯಲ್ಲಿ ಮಿಂದು ಅದರ ಸೊಗಸು ಇನ್ನಷ್ಟು ಹೆಚ್ಚಾಗಿತ್ತು. ಮೋಡಗಳು ನಮ್ಮ ಮಧ್ಯದಲ್ಲೇ ಹಾದುಹೋದವು! ಸಮುದ್ರಮಟ್ಟದಿಂದ ಸುಮಾರು 11000 ಅಡಿಯ ಮೇಲಿದ್ದೇವೆಂದು ತಿಳಿಯಿತು. ಆ ಮಳೆ ನಡುವೆ ನಿಂಬೆ ಟೀ ಹಾಗೂ ಬಿಸಿ ಬಿಸಿ ಪಕೋಡ ಸವಿದು, ಊಟ ಮಾಡಿ ಆ ರಾತ್ರಿಯ ಚಳಿಗೆ ಸಿದ್ಧರಾದೆವು. ಡೇರೆಗಳಲ್ಲಿ ಪ್ರತಿಯೊಬ್ಬರಿಗೂ ಸ್ಲೀಪಿಂಗ್ ಬ್ಯಾಗ್‌ಗಳನ್ನು ಕೊಡುತ್ತಾರೆ. ಅದೊಂದು ಉದ್ದನೆ ಜಿಪ್ ಇರುವ ಚೀಲವೇ ಸರಿ. ಒಳಗೆ ಮೈ ತೂರಿಸಿಕೊಂಡು ಜಿಪ್ ಎಳೆದು ಮಲಗಿದರೆ ಬೆಚ್ಚನೆಯ ಅನುಭವ!

ದಯಾರ ಬುಗ್ಯಲ್ ಜಾಗದ ಸಾಂಸ್ಕೃತಿಕ ಮಹತ್ವವೊಂದು ಗೈಡ್ ಮೂಲಕ ನಮಗೆ ತಿಳಿಯಿತು. ಸಮೀಪದ ಹಳ್ಳಿ ಜನರೆಲ್ಲರೂ ಹೋಳಿ ಹಾಗೂ ಕೃಷ್ಣ ಜನ್ಮಾಷ್ಟಮಿಯಂದು ದಯಾರ ಬುಗ್ಯಲ್‌ನಲ್ಲಿ ಸೇರಿ ಬಣ್ಣಗಳ ಬದಲಾಗಿ, ಬೆಣ್ಣೆ, ಮೊಸರು, ಕೆನೆಹಾಲನ್ನು ಒಬ್ಬರ ಮೇಲೊಬ್ಬರು ಎರಚಿಕೊಂಡು ಹಬ್ಬ ಆಚರಿಸುತ್ತಾರೆ. ಜೇರ್ಕೆಳವೆಗಳಲ್ಲಿ ಹಾಲು ತುಂಬಿಸಿಕೊಂಡು ಕುಣಿಯುತ್ತಾರೆ. ಅಬ್ಬಾ! ಈ ಹಸುರು ಹುಲ್ಲುಗಾವಲು ಎಂತಹ ಸಮೃದ್ಧಿ ತಂದಿದೆ ಎಂದು ನಾವೆಲ್ಲರೂ ಸೋಜಿಗಪಟ್ಟೆವು!

ಹಿಮಾಲಯ ಚಾರಣದ ಗಮ್ಮತ್ತೇ ಗಮ್ಮತ್ತು. ಐದಾರು ದಿನಗಳ ಚಾರಣ ಬಹಳ ಚೆನ್ನಾಗಿರುತ್ತದೆ. ಎಲ್ಲೋ ದಟ್ಟ ಕಾಡಿನ ನಡುವೆ, ರಮ್ಯ ಅಗಾಧ ಗಿರಿಶಿಖರಗಳ ನಡುವೆ ದಿನಗಟ್ಟಲೆ ಚಾರಣ ಮಾಡುವುದು, ಅಲ್ಲಿ ಹರಿಯುವ ಪರಿಶುದ್ಧ ನೀರನ್ನು ಮನದುಂಬಿ ಕುಡಿಯುವುದು, ಯಾವುದೇ ವ್ಯವಸ್ಥೆಗಳಿಲ್ಲದ ತಾಣಗಳಲ್ಲಿ ವಾಸ ಮಾಡುವುದು, ಸ್ನಾನವಿಲ್ಲದೆ, ಹೋಟೆಲ್ ತಿಂಡಿಗಳಿಲ್ಲದೆ, ಫೋನ್ ಸಿಗ್ನಲ್ ಇಲ್ಲದೆ ಸ್ವಚ್ಛಂದವಾಗಿರುವುದು ಎಂಥ ಅನುಭವವಲ್ಲವೇ?

ದಟ್ಟ ಕಾಡು, ರಭಸವಾಗಿ ಹರಿಯುವ ನದಿ, ಮೈ ಬಿರಿಯುವ ಚಳಿ, ಎತ್ತರೆತ್ತರದ ಮರಗಳು, ಗಿರಿಕಂದರಗಳು, ಸಮಾನ ಮನಸ್ಕರ ಕೂಟ... ನಿಂಬೆ ಟೀ, ಚಳಿಯಲ್ಲಿ ಬಿಸಿ ಬಿಸಿ ಉಪ್ಪಿಟ್ಟು... ಇವೆಲ್ಲಾ ಎಂಥ ರೋಮಾಂಚನ! ಸ್ವರ್ಗದ ಸಾಂಗತ್ಯ ತಂದುಕೊಟ್ಟ ಈ ಖುಷಿಯ ಕ್ಷಣಗಳ ಮರೆಯುವುದೆಂತು?

ಪ್ರತಿಕ್ರಿಯಿಸಿ: feedback@sudha.co.in



ದಯಾರ ಬುಗ್ಯಲ್‌ನಲ್ಲಿ ಪ್ರವಾಸಿಗಳ ಡೇರೆಗಳು